ದೇವರೇ ಬಲ್ಲ! ಅಂತೂ 'ಹುಲಿಯ ಹಾಲಿನ ಮೇವು' ಸಿನಿಮಾ ನೋಡಿ ನಮ್ಮೂರಿನ ಬಂಡಿಯಲ್ಲಿ ಕುಳಿತು ಜೊತೆ ಊರು ಸೇರಿದೆವು.

ಆಗಂತೂ ಶಾಲಾ ಮಕ್ಕಳಿಗೆಂದೇ ಮೀಸಲಿಟ್ಟ ಹಲವು ಸಿನಿಮಾಗಳಿದ್ದವು. ಉದಾಹರಣೆಗೆ 'ಪುಟಾಣಿ ಏಜೆಂಟ್ ಒನ್ ಟೂ ತ್ರೀ', 'ಸಿಂಹದ ಮರಿ ಸೈನ್ಯ' ಅರ್ಜುನ್ ಸರ್ಜಾ ಅವರ ಆಗಿನ ಬಹುತೇಕ ಸಾಹಸ, ಪರಿಸರದ ಸಿನಿಮಾಗಳು ಮಕ್ಕಳ ಮನೋಲೋಕವನ್ನು ಅರಳಿಸಿದ್ದವು. ಲೋಹಿತಾಶ್ವನ (ಪುನೀತ್ ರಾಜ್‌ಕುಮಾರ್) 'ಬೆಟ್ಟದ ಹೂವು' ಸಿನಿಮಾ ನೋಡಿದ್ದು ಆನಂತರದ ನೆನಪು. ಅಲ್ಲಿ ಬರುವ 'ತಾಯಿ ಶಾರದೆ ಲೋಕ ಪೂಜಿತೆ ತೇ ನಮೋಸ್ತು ನಮೋಸ್ತುತೇ, ಪ್ರೇಮದಿಂದಲೇ ಹರಸು ತಾಯೆ, ನೀಡು ಸನ್ಮತಿ ಸೌಖ್ಯದಾತೆ' ಎನ್ನುವ ಹಾಡಂತೂ ಸದಾ ನಮಗಾಗ ಸ್ಮರಣೆಯ ಗೀತೆ. ಶಾಲೆಯ ಪ್ರಾರ್ಥನಾಗೀತೆ ತರಹವೇ ಹಾಡಿಕೊಳ್ಳುತ್ತಿದ್ದೆವು. 'ಪುಟಾಣಿ ಏಜೆಂಟ್ ಒನ್ ಟೂ ತ್ರೀ ಸಿಡಿಲಿನ ಮರಿಗಳು ನಾವು ನ್ಯಾಯ ನೀತಿಗೆಂದು ಹೋರಾಡುವೆವು' ಈ ಹಾಡು ಬಂದ ತಕ್ಷಣ ಮೈಯೆಲ್ಲ ರೋಮಾಂಚನವೇ. ನ್ಯಾಯ ನೀತಿ ಹೇಳುವ ಪಾಠದಂತೆ ಸಿನಿಮಾ ನಮಗಾಗ ಕಲಿಕೆಯ ಭಾಗವೇ ಆಗಿತ್ತು.

ಅದೆಂತದೋ ಕೆಚ್ಚು, ವೀರಾವೇಶ. ಬಿಳಿಯಂಗಿ, ಖಾಕಿಚಡ್ಡಿ ಗಾಂಧಿ ಟೊಪ್ಪಿಗೆ ಹಾಕಿಕೊಂಡು ಶಾಲಾ ಮಕ್ಕಳೆಲ್ಲರೂ ಮೇಕಪ್ ಸಮೇತ ಪ್ರಭಾತಪೇರಿ ಹೊರಟ ಹಾಗೆ ಹಡಗಲಿಯ ಸಿನಿಮಾ ನೋಡಿ ಹಾಗೆ ನಮ್ಮೂರಿಗೆ ಹಿಂದಿರುಗುತ್ತಿದ್ದೆವು. ರಸ್ತೆಯಲ್ಲೇ ಹಾಡು ಹೇಳುತ್ತಾ, ಕೇಕೆ ಹಾಕುತ್ತಾ, ಶಿಳ್ಳೆ ಹೊಡೆಯುತ್ತಾ ನಡೆದೇ ಹೋಗುವುದು ಆಗಿನ ನಮ್ಮ ವಾಡಿಕೆ. ಸಿನಿಮಾ ನೋಡಿ ಕಾರ ಮಂಡಕ್ಕಿ ಒಗ್ಗರಣೆ ಮಿರ್ಚಿ ಇಲ್ಲವೇ ಲಿಂಬಿ ಹುಳಿ ಪೆಪ್ಪರ್ಮೆಂಟು ತಿನ್ನುತ್ತಾ ನಮ್ಮೂರ ಸೇರುವುದು ಎಂತಹ ಹಸಿರಿನುಸಿರ ಬಾಲ್ಯ.

ಒಮ್ಮೊಮ್ಮೆ ಇದೇ ಹತ್ತು ಗಂಟೆಯ ಬಸ್ಸಿಗೆ ಹಡಗಲಿಗೆ ಹೋಗಿ ಎರಡು, ಎರಡೂವರೆ ಗಂಟೆ ಹೊತ್ತಿಗೆ ತಟ್ಟಿ ಶಂಕರ್ ಟಾಕೀಸ್ ನಲ್ಲಿ ಸಿನಿಮಾ ನೋಡಿ ಸಂಜೆ ಊರಿಗೆ ಅದೇಗೆ ಮರಳುತ್ತಿದ್ದೆವು. ಯಾರೋ ಬಂಡಿಕಟ್ಟಿದರೆ ಬಂಡಿಯಲ್ಲಿ ಇಲ್ಲವೇ ಬಾಲ್ಯದ ನಮ್ಮ ಹೆಲಿಕಾಪ್ಟರ್ ಡೈನೋಮಾ ಸೈಕಲ್ಲು. ಇಂತಹ ನೂರಾರು ವಿಸ್ಮಯಗಳ ತವರೂರು ನನ್ನೂರು ಮತ್ತು ನನ್ನ ಬಾಲ್ಯ.

ಬಸ್ಸು ಬಂತು ಬಸ್ಸು
ಗೌರ್ಮೆಂಟ್ ಬಸ್ಸು
ಡುಮ್ಮಾ ಡುಮ್ಮಿ ಕುಂತಿದ್ರು
ಡುಮ್ಮುನ ಹೊಟ್ಟೆ ಢಮ್ಮಂತು
ಡುಮ್ಮಿ ಕಣ್ಣಲ್ಲಿ ನೀರು ಬಂತು

ಆ ಕೆಂಪು ಮೂತಿಯ ಬಸ್ಸು ದೊಡ್ಡ ಗಲಾಟೆ ಮಾಡುತ್ತಾ ಹೊಗೆ ಉಗುಳುತ್ತಾ ಬರುತ್ತಿದ್ದರೆ, ರಸ್ತೆಯ ಆಜುಬಾಜು ಸಂಡಾಸು ಕುಳಿತವರು ತಂಬಿಗೆ ಸಮೇತ ಎದ್ದುನಿಂತು ಗೌರವ ಸೂಚಿಸುತ್ತಿದ್ದರು. ಬಸ್ಸು ಸಾಗುತ್ತಿದ್ದಂತೆ ತಮ್ಮ ನಿತ್ಯಕರ್ಮವ ಈಡೇರಿಸಿಕೊಳ್ಳುತ್ತಿದ್ದರು. ಜಾತ್ರೆಯ ಇಕ್ಕೆಲಗಳಲ್ಲಿ ಬಣ್ಣಬಣ್ಣದ ಶಾಪುಗಳು ತಲೆ ಎತ್ತಿದಂತೆ ನಮ್ಮ ಜನ ತಲೆ ಎತ್ತಿ, ಒಮ್ಮೊಮ್ಮೆ ತಲೆಕೆಳಗಾಗಿ ಕುಳಿತು ಬಿಟ್ಟರೆ ಮತ್ತೊಂದು ಎಮ್ಮೆನೋ ಮಣಕನೊ ತಪ್ಪಿಸಿಕೊಂಡು ದಿಕ್ಕಾಪಾಲಾಗಿ ಓಡಿ ಬಂದಾಗ ಇವರು ಎದ್ದು ಜಾಗ ಖಾಲಿ ಮಾಡುವಂಥವರು. ಏನೋ ಒಂದು ತರಹದ ಲೋಕೋಭಿನ್ನರುಚಿ ಇವರಿಗೆ. ಯಾಕೆಂದರೆ ಇವರೆಲ್ಲಾ ನಮ್ಮ ಮಾರ್ಗ-ದರ್ಶಿಗಳು.

ಹಳ್ಳಿಯ ಬಾಳೇ ಇಷ್ಟು. ಯಾವ ಸ್ವಚ್ಛ ಭಾರತ್ ಮಿಷನ್ ಬಂದರೂ ಯೋಜನೆಗಳು, ಡಿಜಿಟಲ್ ಯೋಜನೆಗಳು ಬಂದರೂ ಅವರು ತಂಬಿಗೆ ತಗೊಂಡು ಹೋದರೇನೇ ಬಾಳ ಸೊಗಸು. ನಮಗೆ ಆಗಲೇ ನಿಜವಾದ ಬಸ್ ಮಾಹಿತಿ ಸಿಗುವುದು. ದೂರದಲ್ಲಿ ಬರುವ ಆ ಬಸ್ಸು ಗುರುತು ಹಿಡಿದು, ಓಡಿ ಹೋಗಿ ಹಡಗಲಿಗೆ ಹೊರಟು ನಿಂತವರಿಗೆ ಸುದ್ದಿ ಮುಟ್ಟಿಸುವುದು ನಮಗಾಗ ಕಾಯಕ. ಅವರೋ ತಾಬಡ ತೋಬಡ ಎದ್ದು ಬಿದ್ದವರಂತೆ ಓಡುತ್ತಾ ಬಂದು, ತೇಗುತ್ತಾ ಬಸ್ಸು ಹತ್ತಿ ಕುಳಿತರೆ ಸ್ವರ್ಗದ ಬಾಗಿಲು ತೆರೆದು ಮುಚ್ಚಿದಂತೆ. ನಾವು ಕೈಬೀಸಿ ಎಲ್ಲರಿಗೂ ಟಾಟಾ ಹೇಳಿದರೆ ಅವರು ಅಲ್ಲಿಂದಲೇ ನಮಗೆ ಪೆಪ್ಪರ್ಮೆಂಟು ಎಸೆಯುತ್ತಿದ್ದರು. ಮಣ್ಣಲ್ಲಿ ಬಿದ್ದಾಗ ಮಣ್ಣು ಹತ್ತಿದರೂ ಅದನ್ನು ಹಾಗೇ ಒರೆಸಿಕೊಂಡು ತಿನ್ನುತ್ತಿದ್ದೆವು. ತರಕಾರಿ, ಚೆಂಡುಹೂವು, ಕೋಳಿಮೊಟ್ಟೆ, ಕುರಿ, ಆಡು, ಪಲ್ಲ ಜೋಳ, ಶೇಂಗಾ, ಗಂಟುಹತ್ತಿ ಎಲ್ಲವೂ ಹತ್ತು ಗಂಟೆ ಬಸ್ಸಿನ ಒಡಲ ತುಂಬಿದಂಥವೇ. ಎಮ್ಮೆ ಆಕಳು ಎತ್ತು ಬಿಟ್ಟರೆ ಉಳಿದ ಪದಾರ್ಥಗಳ ಅದಮ್ಯ